ಸೂಚನೆಗಳನ್ನು ನೀಡಿ, ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡೇ ಅಜ್ಜ ಒಪ್ಪಿಗೆಯಿತ್ತಿದ್ದರು. ಮೊಮ್ಮಗ ಎದುರು ನೋಡುತ್ತಿದ್ದ ದಿನ ಬಂತು. ಟ್ಯೂಶನ್ ಕೊಡಲು ಬರುವ ಮೇಡಂ ಮೃಗಾಲಯ ಹೇಗಿರುತ್ತದೆ ಎಂದು ಎಷ್ಟು ಚೆನ್ನಾಗಿ ವರ್ಣಿಸಿದ್ದರು! ಮಗುವಿನಲ್ಲಿ ಹುಟ್ಟಿಬಂದ ಉತ್ಸಾಹಕ್ಕೆ ಅದೇ ಮೂಲಕಾರಣ. ಟೀಚರ್ ಗರ್ಜಿಸಿದಾಗಲೇ ಹುಡುಗನಿಗೆ ರೋಮಾಂಚನವಾಗಿತ್ತು... ಇನ್ನು ರಿಯಲ್ ಹುಲಿ ಸಿಂಹಗಳು ಗರ್ಜಿಸಿದರೆ ಹೇಗಿರುತ್ತೆ ಎಂಬ ಕುತೂಹಲ... 'ನನಗೆ ನೋಡಲೇಬೇಕು' ಎಂದು ಹಟ ಹಿಡಿದಿದ್ದ ಮೊಮ್ಮಗ ಕೊನೆಗೂ ಅಜ್ಜನ ಒಪ್ಪಿಗೆ ಪಡೆದುಕೊಳ್ಳುವಲ್ಲಿ ಯಶಸ್ಸು ಕಂಡಿದ್ದ.

ಮಂತ್ರಿಗಳು ಮೊಮ್ಮಗನೊಡನೆ ತಾನು ಬರುತ್ತೇನೆ ಅಥವಾ ಬರುತ್ತಿಲ್ಲ ಎಂದು ಯಾರಿಗೂ ಹೇಳಲಿಲ್ಲ ಅಂದ ಮೇಲೆ ಎಲ್ಲರೂ ಮಂತ್ರಿಯವರು ಬರುತ್ತಾರೆ ಎಂದೇ ನಂಬಿದರು. ಹಾಗಾಗಿ ಇಡೀ ಆಡಳಿತ ಯಂತ್ರವೇ ಚುರುಕಾಗಿತ್ತು. ಮಂತ್ರಿಗಳ ಬಂಗಲೆಯಿಂದ ಮೃಗಾಲಯದ ವರೆಗಿನ ರಸ್ತೆಯಲ್ಲಿ ಹತ್ತಾರು ಮಂದಿ ಎಸ್ಸೈಗಳನ್ನು ಡ್ಯೂಟಿಯಲ್ಲಿ ನಿಲ್ಲಿಸಿ ನಾಕಾಬಂದಿ ಮಾಡಲಾಯಿತು. ಮೃಗಾಲಯದಲ್ಲಿ ಪಬ್ಲಿಕ್ಕಿಗೆ ಎರಡು ತಾಸು ನಿಷೇಧ ಹೇರಲಾಯಿತು. ಬಾಂಬ್ ಸ್ಕ್ವಾಡಿನವರು ಬಂದು ಸುತ್ತಾಡಿ ಹೋದರು.



ಗೋಪೀನಾಥ ರಾವ್

ಮೃಗಾಲಯದ ಅಧಿಕಾರಿಗಳೂ ಎಚ್ಚೆತ್ತುಕೊಂಡಿದ್ದರು. ಆವತ್ತು ಬೆಳಿಗ್ಗೆಯೇ ಪ್ರಾಣಿಗಳಿಗೆಲ್ಲ ಹೊಟ್ಟೆ ತುಂಬ ತಿನ್ನಿಸಿ ಅಕಸ್ಮಾತ್ ಅವುಗಳಿಂದ ಅತಿಥಿಗಳ ಮೇಲೆ ಆಕ್ರಮಣವಾಗುವ ಎಲ್ಲ ಸಾಧ್ಯತೆಗಳನ್ನು ಕಡಿಮೆ ಮಾಡಿಕೊಂಡಿದ್ದರು. ಅಕಸ್ಮಾತ್ ಯಾವುದಾದರೂ ಮೃಗ ಬೇಲಿಹಾರಲು ಪ್ರಯತ್ನಿಸಿದರೆ ಸೆಕ್ಯೂರಿಟಿಯವರಿಗೆ ತಕ್ಷಣ ಗುಂಡಿಕ್ಕಲು ನಿರ್ದೇಶನ ನೀಡಲಾಗಿತ್ತು.

ಎರಡು ಕಡೆಯೂ ಕೋವಿ ಹಿಡಿದುಕೊಂಡ ಸೆಕ್ಯುರಿಟಿಯವರ ನಡುವೆ ಮಂತ್ರಿಗಳ ಮೊಮ್ಮಗ ಮತ್ತು ಟೀಚರ್ ಇಬ್ಬರೇ ಮೃಗಾಲಯ ಸುತ್ತಿದರು. ಹೊಟ್ಟೆ ತುಂಬ ತಿಂದು ಮಲಗಿದ್ದ ಪ್ರಾಣಿಗಳ್ಯಾವುವೂ ಗುರ್ರ್ ಅನ್ನಲಿಲ್ಲ. ಸುಮ್ಮನೆ ಮಲಗಿಕೊಂಡಿದ್ದ ಪ್ರಾಣಿಗಳನ್ನು ಎಬ್ಬಿಸಲು ತಿಳಿಯದ ಹುಡುಗ, 'ಹೈ... ಹೋ... ಶೂ... ಶೂ...' ಎಂದು ಬೊಬ್ಬೆ ಹೊಡೆದರೂ ಅವು ಕ್ಯಾರೇ ಅನ್ನಲಿಲ್ಲ. ಟೀಚರ್ ಸಹಾ ಪ್ರಯತ್ನಿಸಿದರೂ ಫಲ ದೊರೆಯಲಿಲ್ಲ. ಸುಮ್ಮನೆಯಿರುವವರನ್ನು ಕೆರಳಿಸಿ ಎಬ್ಬಿಸುವುದರಲ್ಲಿ ಸಿದ್ಧಹಸ್ತರಾಗಿದ್ದ ಮಂತ್ರಿಗಳು ಬಂದಿದ್ದರೆ ಬಹುಶಃ ಏನಾದರೂ ಮಾಡುತ್ತಿದ್ದರೋ ಏನೋ. ದೊಡ್ಡ ಆಸೆಯಿಂದ ಬಂದಿದ್ದ ಹುಡುಗನಿಗೆ ಟೀಚರ್ ಹೇಳಿದ ರೋಮಾಂಚನವೇ ಸಿಗಲಿಲ್ಲ. ಹುಡುಗನಿಗೆ ಆದ ನಿರಾಶೆ ಹೇಳತೀರದು. ಅಸಹಾಯ ಟೀಚರ್ ಹುಡುಗನಿಗೆ ವಿವರಣೆ ನೀಡಿದಳು... 'ಈ ಪ್ರಾಣಿಗಳಿಗೆಲ್ಲ ಸರಕಾರ ಮಾಂಸ ಕೊಡುತ್ತದೆ. ಈಗಾಗಲೇ ಹಾಕಿ ಹೋಗಿರಬೇಕು, ತಿಂದು ಮಲಗಿಕೊಂಡಿವೆ. ಹಾಗಾಗಿ ಶಾಂತವಾಗಿವೆ. ನಾವು ಬಂದ ಸಮಯ ಸರಿಯಿಲ್ಲ, ಇನ್ನೊಮ್ಮೆ ಬರೋಣ.'

ಅಸಮಾಧಾನದಿಂದಲೇ ಹಿಂತಿರುಗಿ ಬಂದ ಮೊಮ್ಮಗ ಮನೆಯಲ್ಲಿ ಹಟಹಿಡಿದು ಊಟ ಮಾಡದೆ ಸತ್ಯಾಗ್ರಹ ಕುಳಿತಿದ್ದ. ಮಧ್ಯಾಹ್ನ ಮನೆಗೆ ಬಂದ ಮಂತ್ರಿಗಳಿಗೆ ಮೊಮ್ಮಗ ಸತ್ಯಾಗ್ರಹ ಕುಳಿತಿದ್ದಾನೆ ಅಂದಾಗ ಇನ್ನಿಲ್ಲದ ಸಂತೋಷವಾಯಿತು. ಆಗಲೇ ನೇತಾರನಾಗುವ ಲಕ್ಷಣಗಳು!